ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಹೊಸ ಬಡಾವಣೆಗಳನ್ನು ನಿರ್ಮಾಣ ಮಾಡುವ ಬಗ್ಗೆ ಸರ್ಕಾರ ಯಾವುದಾದರೂ ಕ್ರಮ ಕೈಗೊಂಡಿದೆಯೇ?

ಆ) ಇದುವರೆಗೆ ನಿವೇಶನ ರಹಿತರು ನಿವೇಶನಕ್ಕಾಗಿ ಎಷ್ಟು ಅರ್ಜಿಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಸಲ್ಲಿಸಿದ್ದಾರೆ?

ಶ್ರೀ ಎಂ. ವೀರಪ್ಪ ಮೊಯಿಲಿ
(ಮುಖ್ಯಮಂತ್ರಿಗಳು)

ಹೌದು. ಸರ್ಕಾರವು ೧೧ ಹೊಸ ಬಡಾವಣೆಗಳನ್ನು ಅಭಿವೃದ್ಧಿ ಪಡಿಸಲು ಈಗಾಗಲೇ ಮಂಜೂರಾತಿ ನೀಡಿದೆ.

ನಿವೇಶನಗಳನ್ನು ಬೇಡಿ ಪ್ರಾಧಿಕಾರಕ್ಕೆ ಒಟ್ಟು ೮೬,೯೮೮ ನಿವೇಶನ ರಹಿತರು ಅರ್ಜಿಗಳನ್ನು ಸಲ್ಲಿಸಿರುತ್ತಾರೆ.

ಶ್ರೀ ಕೆ.ಎಚ್. ಹನುಮೇಗೌಡ:- ನಾವು ಬೆಳಿಗ್ಗೆಯಿಂದ ಕಾದು ಕುಳಿತಿದ್ದೇವೆ. ನಮ್ಮ ಪ್ರಶ್ನೆ ಬರಲಿಲ್ಲ ಅಂದರೆ ಹೇಗೆ?

(ಗೊಂದಲ)

ಅಧ್ಯಕ್ಷರು:- ಪ್ರಶ್ನೋತ್ತರ ವೇಳೆ ಮುಗಿಯಿತು. ನಾಳೆ ನೋಡೋಣ. ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು.

ಶ್ರೀ ಎಂ. ವೀರಪ್ಪ ಮೊಯಿಲಿ:- ಮಾನ್ಯ ಅಧ್ಯಕ್ಷರೇ ಈಗಾಗಲೇ ಮುಂದಿನ ಅಜೆಂಡಾಗೆ ಹೋಗಿ ಆಗಿದೆ. ನಮ್ಮ ಪದ್ಧತಿ ಪ್ರಕಾರ ಒಮ್ಮೆ ಮುಂದೆ ಹೋದ ಮೇಲೆ ಪುನಃ ಹಿಂದೆ ಹೋಗತಕ್ಕಂಥ ಪರಿಸ್ಥಿತಿ ಇಲ್ಲ. ಮುಂದೆ ನಾವು ಏನು ಮಾಡಬೇಕು ಎನ್ನುವ ಬಗ್ಗೆ ಬಿ.ಎ.ಸಿ.ನಲ್ಲಿ ಮಾತನಾಡೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಇವತ್ತು ತಾವೇನು ಬಸ್ ದರಗಳನ್ನು ಹೆಚ್ಚು ಮಾಡಿದ್ದೀರಿ, ನಾವು ಹೆಚ್ಚು ಮಾಡಿದ್ದೇವೆ ಇಲ್ಲ ಎಂದು ಹೇಳುವುದಿಲ್ಲ. ಆ ಪರಿಸ್ಥಿತಿ ಬೇರೆ ಇದೆ. ಆದರೆ ರೀಜನಬಲ್ ಆಗಿ ಏರಿಸಲು ನಮ್ಮನ್ನು ಕರೆಯಿಸಿ ಮಾತನಾಡಿ ಈ ತರಹ ಇದೆ ಹೇಗೆ ಮಾಡಬೇಕೆಂದು ಕೇಳಲಿಲ್ಲ.

ಶ್ರೀ ವಾಟಾಳ್ ನಾಗರಾಜ್:- ತಾವು ಜಾಸ್ತಿಮಾಡಿದ್ದೀರಿ. ಕಡಿಮೆ ಎನೂ ಮಾಡಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಇಲ್ಲವೆಂದು ನಾನು ಹೇಳುವುದಿಲ್ಲ. ನಮ್ಮ ಆಸೆ ಕಡಿಮೆ ಮಾಡಿ ಎನ್ನತಕ್ಕಂಥಾದ್ದು. ಈ ವಿಚಾರದಲ್ಲಿ ನಾನು ತಮ್ಮ ಜೊತೆ ಸ್ಪರ್ಧೆಗೆ ಇಳಿಯುವುದಕ್ಕೆ ತಯಾರಾಗಿಲ್ಲ. ಪ್ರಾಮಾಣಿಕವಾಗಿ ಸಾರಿಗೆ ಇಲಾಖೆ ಬಗ್ಗೆ ಕೆಲವು ಸಲಹೆಗಳನ್ನು ಕೊಟ್ಟಿದ್ದೇನೆ. ಅವುಗಳನ್ನು ತಾವು ಮಾಡಿದರೆ ತಾವು ಸಮಯ ಕೊಟ್ಟಿರುವುದರಿಂದ ಇದರಲ್ಲಿ ನಾನು ರಾಜಕೀಯ ಬೆರೆಸಿ ಏನೂ ಮಾತನಾಡಿಲ್ಲ. ಕೆಲವು ಸಲಹೆಗಳನ್ನು ಕೊಟ್ಟಿದ್ದೇನೆ. ಆ ಸಲಹೆಗಳನ್ನು ನೀವು ತೆಗೆದುಕೊಂಡು ಇಂಪ್ಲಿಮೆಂಟ್ ಮಾಡಿದರೆ ರಾಜ್ಯದ ಜನತೆಯ ಮೇಲೆ ಹೆಚ್ಚಿನ ದರಗಳನ್ನು ಏರಿಸತಕ್ಕಂಥ ಅವಶ್ಯಕತೆ ಇರುವುದಿಲ್ಲ. ನಿಮ್ಮ ಪಕ್ಷದ ಹಿತದೃಷ್ಟಿಯಿಂದ ಸರ್ಕಾರದ ಹಿತದೃಷ್ಟಿಯಿಂದ ವಿಚಾರ ಮಾಡಿ ಕಳೆದ ಮೂರುವರೆ ವರ್ಷಗಳಲ್ಲಿ ಸರ್ಕಾರದ ಆಡಳಿತದಲ್ಲಿ ಎನಾಗಿದೆ ಎನ್ನುವುದನ್ನು ವಿಚಾರ ಮಾಡಿ ಇಷ್ಟು ಹೇಳಿದ್ದೇನೆ, ಏರಿಸಿರುವ ಬೆಲೆಗಳನ್ನು ವಾಪಸ್ಸು ತೆಗೆದುಹಾಕಿ ಸಂಪೂರ್ಣವಾಗಿ ಎನು ೨೬ ಪರ್ಸೆಂಟ್ ಹಾಕಿದ್ದೀರಿ, ಅದನ್ನು ರದ್ದು ಮಾಡಿ ಹೌಸ್ ಕಮಿಟಿ ಮಾಡಿ ಅವರು ಕುಳಿತುಕೊಂಡು ವಿಚಾರ ಮಾಡೋಣ.

ಸರಿ ಮಾಡೋಣ. ೬ ತಿಂಗಳಲ್ಲಿ ನಾವು ಎನು ಪ್ಯಾರಾ ಮೀಟರ್ಸ್ ಮಾಡಬೇಕೆಂದು ಹೇಳುತ್ತೇವೆ I take it as a challenge.. ತಾವು ಇದನ್ನು ಒಪ್ಪಿಕೊಳ್ಳಿ. ಅದನ್ನು ಬಿಟ್ಟು ರಾಜ್ಯದ ಜನತೆಯ ಮೇಲೆ ಬೆಲೆಗಳು ಏರಿಸತಕ್ಕಂಥಾದ್ದು ಸರಿಯಲ್ಲ. ಜನಸಾಮಾನ್ಯರಿಗೆ, ವೈದ್ಯರಿಗೆ, ಯುವಕರಿಗೆ, ನಿರುದ್ಯೋಗಿಗಳಿಗೆ ವಿದ್ಯಾರ್ಥಿಗಳಿಗೆ ಸಾಮಾನ್ಯ ಜನಗಳಿಗೆ ಬಹಳ ತೊಂದರೆ ಆಗಿದೆ. ತಾವು ಇನ್ನೂ ಸಾರಿಗೆ ಸಂಸ್ಥೆ ಬಗ್ಗೆ ತಿಳಿದುಕೊಳ್ಳುವ ವಿಚಾರಗಳು ಜಾಸ್ತಿ ಇವೆ. ಅಲ್ಲಿರತಕ್ಕಂಥ ಕೆಲವು ವಿಚಾರಗಳನ್ನು ಮಾತ್ರ ನಾನು ತಮಗೆ ಹೇಳಿದೆ. ರಿಕ್ರೂಟ್‌ಮೆಂಟ್ಸ್ ಬಗ್ಗೆ ಮಾನ್ಯ ಬೈರೇಗೌಡರು ಹೇಳಿದರು. ನಿಜ. ಇದರ ಬಗ್ಗೆ ಎನು ಮಾಡಬೇಕು ಎಂದು ಮಾತನಾಡತಕ್ಕಂಥಾದ್ದು ಇದೆ. ನಾನು ಕೊಟ್ಟ ಸಲಹೆಗಳನ್ನು ಇಂಪ್ಲಿಮೆಂಟ್ ಮಾಡಿ. ಇನ್ನು ಅನೇಕ ಸಲಹೆಗಳು ಇವೆ. ಸಮಯ ಬೇಕಾಗುತ್ತದೆ. ಸಮಯ ಇಲ್ಲ. ನಾವು ನಿಮ್ಮ ಮನಸ್ಸನ್ನು ಹೊಲಿಸಿಕೊಳ್ಳಲು ಪ್ರಯತ್ನ ಮಾಡಿದ್ದೇವೆ. ನಿಲುವಳಿ ಸೂಚನೆ ಬಗ್ಗೆ ತಾವು ದಯವಿಟ್ಟು ಅವಕಾಶ ಕೊಡಿ. ಬಹಳ ಮಹತ್ವದ ವಿಚಾರ. ಇಡೀ ರಾಜ್ಯದಲ್ಲಿ, ಪ್ರತಿನಿತ್ಯ ೫೮ ಲಕ್ಷ ಜನರು ನಮ್ಮಲ್ಲಿರತಕ್ಕಂಥ ನಾಲ್ಕುವರೆ ಕೋಟಿ ಜನಸಂಖ್ಯೆಯಲ್ಲಿ ೯ ಜನಗಳಿಗೆ ಇಬ್ಬರು ಮಾತ್ರ ಪ್ರಯಾಣ ಮಾಡುತ್ತಾರೆ. ಇದು ಬಹಳ ಮುಖ್ಯವಾದ ವಿಚಾರ. ಇದಕ್ಕಿಂತ ಯಾವುದೂ ಮುಖ್ಯವಾದಂತಹ ವಿಚಾರ ಸಿಗುವುದಿಲ್ಲ. ಈ ವಿಚಾರದಲ್ಲಿ ಬಹುಶಃ ಆಡಳಿತ ಪಕ್ಷದವರದ್ದು ಬಿನ್ನಾಭಿಪ್ರಾಯ ಇಲ್ಲ ಅವರಿಗೂ ಚುನಾವಣೆ ಹತ್ತಿರ ಬರುತ್ತಿದೆ. ಅವರೂ ಸಹ ಚುನಾವಣೆಯನ್ನು ಎದುರಿಸಬೇಕಾಗುತ್ತದೆ. ಜನಸಾಮಾನ್ಯರ ಹತ್ತಿರ ಹೋಗಬೇಕಾಗುತ್ತದೆ. ಆ ಕಾರಣದಿಂದ ತಮ್ಮ ಮನಸ್ಸು ಹೊಲಿಸಿಕೊಳ್ಳಲು ಪ್ರಯತ್ನ ಮಾಡಿದ್ದೇವೆ. ಇನ್ನು ಹೆಚ್ಚು ವಿಚಾರ ಹೇಳತಕ್ಕಂಥಾದ್ದು ಇದೆ.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೆ, ತಾವು ಹೇಳಿದ ಒಂದು ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಒಂದು ಗಂಟೆ ಕ್ವೊಶ್ಚನ್ ಅವರ್ ಏನಿದೆ ಅದರಲ್ಲಿ ೨೦ ಪ್ರಶ್ನೆಗಳನ್ನು ಮುಗಿಸಬೇಕಾಗುತ್ತದೆ. ಇದರಿಂದ ಲಾಸ್ಟ್ ಪ್ರಶ್ನೆ ಇರುವವರಿಗೆ ಕಷ್ಟವಾಗುತ್ತದೆ. ನಾವು ಎಷ್ಟೋ ಸಾರಿ ನೋಡಿದ್ದೇವೆ, ೬ ರಿಂದ ೧೦ ಪ್ರಶ್ನೆಗಳು ಮುಗಿಯುತ್ತವೆ ಆನಂತರ ಉಳಿದ ಪ್ರಶ್ನೆಗಳು ಒಂದು ಗಂಟೆಯಲ್ಲಿ ಮುಗಿಯುವುದಿಲ್ಲ. ಆದುದರಿಂದ ಇದರ ಬಗ್ಗೆ ಬಿಸ್‌ನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನವಾಗಬೇಕಾಗುತ್ತದೆ. ಅಥವಾ ಒಂದು ಪ್ರಶ್ನೆಗೆ ೨ ಮಿನಿಟ್ ಅಥವಾ ೩ ಮಿನಿಟ್ ಎಂದು ನಿರ್ದಿಷ್ಟವಾಗಿ ಸಮಯವನ್ನು ಫಿಕ್ಸ್ ಮಾಡಬೇಕಾಗುತ್ತದೆ. ಹಾಗೆ ಮಾಡಿದರೆ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಬರುತ್ತದೆ. ಇವತ್ತು ಬಹಳ ಇಂಪಾರ್ಟೆಂಟ್ ಕ್ವೊಶ್ಚನ್ಸ್ ಇವೆ. ಅವುಗಳಿಗೆ ಉತ್ತರ ಇಲ್ಲವಾಗಿದೆ. ಇದೇ ಸದನದಲ್ಲಿ ಪುನಃ ಆ ಪ್ರಶ್ನೆಗಳು ಬರಲಿಕ್ಕೆ ಸಾಧ್ಯವಿಲ್ಲ. ಸರ್ಕಾರ ಮತ್ತು ವಿರೋಧ ಪಕ್ಷಗಳು ಏನು ಮಾಡುತ್ತಿದೆಯೆಂದು ಜನಕ್ಕೆ ಗೊತ್ತಾಗಬೇಕಾಗಿದೆ. ಆದುದರಿಂದ ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ. ಸಾಧ್ಯವಿದ್ದರೆ ಈ ಪ್ರಶ್ನೆಗಳಿಗೆ ತಾವು ಅವಕಾಶ ಮಾಡಿಕೊಡಿ. ಇವು ಬಹಳ ಮುಖ್ಯವಾದ ಪ್ರಶ್ನೆಗಳು ಇವೆ. ಯಾವುದೇ ಪ್ರಶ್ನೆಯನ್ನು ಒಂದು ಇತಿಮಿತಿಯೊಳಗೆ ಕೇಳಬೇಕಾಗುತ್ತದೆ. ಆದರ ಬಗ್ಗೆ ಸಂದೇಹವೇ ಇಲ್ಲ. ತಮ್ಮ ಸಲಹೆಯನ್ನು ನಾನು ಸಂಪೂರ್ಣವಾಗಿ ಒಪ್ಪತ್ತೇನೆ. ಯಾವ ಸದಸ್ಯರು ಇವತ್ತು ಪ್ರಶ್ನೆ ಹಾಕಿದ್ದಾರೋ ಅವರಿಗೂ ಅವಕಾಶ ಸಿಗಬೇಕಾಗುತ್ತದೆ. ಆ ದೃಷ್ಟಿಯಿಂದ ಕಾರ್ಯಕ್ರಮ ಹಾಕಿಕೊಳ್ಳಬೇಕಾಗುತ್ತದೆ ಮತ್ತು ಸಮಯ ನಿಗದಿಯಾಗಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:- ತಮ್ಮ ತೀರ್ಪನ್ನು ನಾವು ವಿರೋಧ ಮಾಡುತ್ತಿಲ್ಲ.

ಅಧ್ಯಕ್ಷರು: ಈಗ ವಿರೋಧ ಪಕ್ಷದ ನಾಯಕರು ಹೇಳಿದರು, ಈ ವಿಷಯವನ್ನು ಬಿಸ್‌ನೆಸ್ ಅಡ್ವೈಸರಿ ಕಮಿಟಿಯಲ್ಲಿ ಚರ್ಚೆ ಮಾಡುತ್ತೇವೆ. ಚರ್ಚೆ ಮಾಡಿದ ನಂತರ ತೀರ್ಮಾನ ತಗೆದುಕೊಳ್ಳಲಾಗುತ್ತದೆ. ಸದನದಲ್ಲಿ ಪ್ರಶ್ನೆ ಕೇಳುವ ಎಲ್ಲಾ ಸದಸ್ಯರಿಗೆ ಅವಕಾಶ ಸಿಗಬೇಕು